ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 16-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕನ್ನಡ ಪುಸ್ತಕ ಪ್ರಾಧಿಕಾರದಿಂದ ವಿವಿಧ ಪ್ರಶಸ್ತಿಗಳ ಪ್ರದಾನ ಹಾಗೂ ಬಹುಮಾನ ವಿತರಣಾ ಸಮಾರಂಭ.<br><br>ಸಮಾರಂಭದ ಉದ್ಘಾಟನೆ, ಪ್ರಶಸ್ತಿ ಪ್ರದಾನ ಹಾಗೂ ಬಹುಮಾನ ವಿತರಣೆ:<br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ಮಹೇಂದ್ರ ಜೈನ್, ಅಪರ ಮುಖ್ಯ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,<br><br>ಅಧ್ಯಕ್ಷತೆ:<br><br>ಡಾ. ಬಂಜಗೆರೆ ಜಯಪ್ರಕಾಶ,<br>ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ. | **17-03-2015**<br>ಮಂಗಳವಾರ<br>ಸಂಜೆ<br>**6-00** ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ, ಜೆ.ಸಿ. ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

<u>**ಪತ್ರಿಕಾ ಪ್ರಕಟಣೆ**</u>

## ವಿಧಾನ ಮಂಡಲದ ಸುದ್ದಿಗಳು:

## ಸಿದ್ಧಲಿಂಗಯ್ಯ, ರಾಮಾನಾಯ್ಡು ನಿಧನಕ್ಕೆ ವಿಧಾನಸಭೆ ಸಂತಾಪ

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ಇಂದು ಬೆಳಿಗ್ಗೆ ವಿಧಾನಸಭೆ ಸಮಾವೇಶಗೊಳ್ಳುತ್ತಿದ್ದಂತೆ ವಿಧಾನಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರು ಕನ್ನಡ ಚಲನಚಿತ್ರ ನಿರ್ದೇಶಕ ಸಿದ್ದಲಿಂಗಯ್ಯ ಹಾಗೂ ತೆಲುಗು ಚಿತ್ರರಂಗದ ಹಿರಿಯ ನಿರ್ಮಾಪಕ ಡಿ. ರಾಮಾನಾಯ್ಡು ಅವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಂಡಿಸಿದರು.

ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿದ್ಧಲಿಂಗಯ್ಯನವರು ಕನ್ನಡ ಚಿತ್ರರಂಗ ಕಂಡ ಪ್ರತಿಭಾವಂತ ನಿರ್ದೇಶಕರು, ಹಳ್ಳಿಯಲ್ಲಿ ಜನಿಸಿ, ಗ್ರಾಮೀಣ ಅನುಭವಗಳನ್ನು ಅರ್ಥಮಾಡಿಕೊಂಡು ತಮ್ಮ ಚಿತ್ರಗಳಲ್ಲಿ ಹಳ್ಳಿಗಾಡಿನ ಸೊಗಡನ್ನು ಬಿಂಬಿಸಿದರು. ಸಾಮಾಜಿಕ ಕಳಕಳಿ ಮತ್ತು ಮೌಲ್ಯಯುತ ಸಂದೇಶ ಇವರ ಚಿತ್ರಗಳಲ್ಲಿತ್ತು ಎಂದು ತಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿದರು. ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್, ಶಾಸಕ ವೈ.ಎಸ್.ವಿ.ದತ್ತ ಅವರು ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ನಂತರ ವಿಧಾನಸಭೆಯು ಅಗಲಿದ ಸಿದ್ಧಲಿಂಗಯ್ಯ ಹಾಗೂ ಡಿ. ರಾಮಾನಾಯ್ಡು ಅವರ ನಿಧನಕ್ಕೆ ಒಂದು ನಿಮಿಷ ಎದ್ದು ನಿಂತು ಮೌನ ಆಚರಿಸಿತು.

ಬಾಬು:ಜಿಪಿಆರ್.

## ಮೇಕೆದಾಟುವಿನಲ್ಲಿ ಆಣೆಕಟ್ಟು ನಿರ್ಮಾಣ ಪರಿಶೀಲನೆಯಲ್ಲಿ

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ಮೇಕೆದಾಟುವಿನ ಮೇಲ್ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ/ಶೇಖರಣಾ ಜಲಾಶಯಗಳ ನಿರ್ಮಿಸಲು ಉದ್ದೇಶಿಸಲಾಗಿದ್ದು, ಈ ನಿಟ್ಟಿನಲ್ಲಿ ತನಿಖೆ, ಸರ್ವೆ, ವಿನ್ಯಾಸ ನಕ್ಷೆ ಹಾಗೂ ಅಂದಾಜುಗಳ ತಯಾರಿಕೆ, ವಿವರವಾದ ಯೋಜನಾ ವರದಿಯ ತಯಾರಿಕೆ ಇತ್ಯಾದಿಗಳಿಗಾಗಿ ಸಮಾಲೋಚಕರನ್ನು ಪೂರ್ವಾರ್ಹತೆಗೊಳಿಸುವ ಸಲುವಾಗಿ 2014 ರ ಅಕ್ಟೋಬರ್

25 ರಂದು ಮಾಹಿತಿಗಳನ್ನು ಆಹ್ವಾನಿಸಲಾಗಿದೆ. ಐದು ಸಮಾಲೋಚಕರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಅದು ಪರಿಶೀಲನೆಯಲ್ಲಿ ಇದೆ ಎಂದು ರಾಜ್ಯ ಜಲಸಂಪನ್ಮೂಲ ಸಚಿವ ಶ್ರೀ ಎಂ. ಬಿ. ಪಾಟೀಲ್ ಅವರು ಶಾಸಕ ಹೆಚ್. ಸಿ. ಬಾಲಕೃಷ್ಣ ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಇಂದು ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪೂರ್ವಾರ್ಹತೆಗೊಳ್ಳುವ ಸಮಲೋಚಕರಿಂದ ವಿವರವಾದ ಯೋಜನಾ ವರದಿಯನ್ನು ಪಡೆದ ನಂತರ ನಿಯಮಾನುಸಾರ ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ರಾಜ್ಯದಲ್ಲಿ 258 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಒಟ್ಟು 258 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ರಾಜ್ಯ ಕಾರ್ಮಿಕ ಸಚಿವ ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ ಅವರು ಶಾಸಕ ಶ್ರೀ ಹೆಚ್.ಡಿ. ರೇವಣ್ಣ ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಇಂದು ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕೆಲವೊಂದು ತರಬೇತಿ ಸಂಸ್ಥೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದ್ದು, ಈ ಖಾಸಗಿ ಕಟ್ಟಡಗಳು ಮೂಲಸೌಕರ್ಯ ಹೊಂದಿವೆ ಹಾಗೂ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವರ ತಮ್ಮಲ್ಲಿ ಲಿಖಿತ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

## ಬೃಹತ್ ನೀರಾವರಿ ಯೋಜನೆಗಳಿಗೆ 32,775.32 ಕೋಟಿ ರೂ. ವೆಚ್ಚ

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿನ ಬೃಹತ್ ನೀರಾವರಿ ಯೋಜನೆಗಳಿಗೆ ಇಲ್ಲಿಯವರೆಗೆ 32,775.32 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ ಎಂದು ರಾಜ್ಯ ಜಲಸಂಪನ್ಮೂಲ ಸಚಿವ ಶ್ರೀ ಎಂ. ಬಿ. ಪಾಟೀಲ್ ಇಂದು ವಿಧಾನಸಭೆಯಲ್ಲಿ ಶ್ರೀನಿವಾಸಪುರ ಶಾಸಕ ಶ್ರೀ ಕೆ.ಆರ್. ರಮೇಶ್‌ಕುಮಾರ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ರಾಜ್ಯದಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ ಬೃಹತ್ ನೀರಾವರಿ ಯೋಜನೆಗಳಿಂದ 2414835 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ರಾಜ್ಯದಲ್ಲಿ ಜಲಸಂಪನ್ಮೂಲ

ಇಲಾಖೆಯಡಿ ಪ್ರಗತಿಯಲ್ಲಿರುವ ಬೃಹತ್ ನೀರಾವರಿ ಯೋಜನೆಯಿಂದ 990017 ಹೆಕ್ಟೇರ್ ನೀರಾವರಿ ಸಾಮರ್ಥ್ಯ ಸೃಷ್ಟಿಸಬೇಕಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ 3 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ. ಆಯ್ಕೆ ಪಟ್ಟಿಯು ಆಯೋಗದ ಅಂತರ್ಜಾಲ http://kpsc.kar.nic.in ನಲ್ಲಿ ವೀಕ್ಷಿಸಬಹುದಾಗಿದೆ.

ಈ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸುವವರು ಪ್ರಕಟಗೊಂಡ 15 ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಲು ಸೂಚಿಸಿದೆ.

ಬಾಬು:ಜಿಪಿಆರ್.

## ಸಮಿತಿ ರಚನೆ

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ಮಾಜಿ ಉಪ ಪ್ರಧಾನಿ ದಿವಂಗತ ಡಾ. ಬಾಬುಜಗಜೀವನರಾಂ ಅವರ ಹೆಸರಿನಲ್ಲಿ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ನೀಡುವ ವಾರ್ಷಿಕ ಪ್ರಶಸ್ತಿಗಳಿಗೆ 2015–16 ನೇ ಸಾಲಿಗೆ ಆಯ್ಕೆ ಮಾಡಲು ಡಾ. ಕೆ. ಮರುಳ ಸಿದ್ಧಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ. ಸಮಿತಿಯಲ್ಲಿ ಡಾ. ಎಲ್. ಹನುಮಂತಯ್ಯ, ಪ್ರೊ. ಹೆಚ್. ಎಂ. ರುದ್ರಸ್ವಾಮಿ, ಮಾವಳ್ಳಿ ಶಂಕರ್, ಕೆ. ಷರೀಫ್, ಅವರನ್ನು ಸದಸ್ಯರನ್ನಾಗಿ ನೇಮಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# <u>ಸಚಿವರಿಗೆ ಡಾಕ್ಟರೇಟ್ ಪದವಿ</u>

**ಬೆಂಗಳೂರು, ಮಾರ್ಚ್ 16, (ಕರ್ನಾಟಕ ವಾರ್ತೆ)**

ರಾಜ್ಯ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ್ ಅವರಿಗೆ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರದ ಡಿ. ವೈ. ಪಾಟೀಲ್ ವಿಶ್ವ ವಿದ್ಯಾನಿಲಯವು ಮಾರ್ಚ್ 17 ರಂದು ಕೊಲ್ಹಾಪುರದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಲಿದೆ.

ಬಾಬು:ಜಿಪಿಆರ್.